# ಕಾನನ

DECEMBER 2011

ನಿಸರ್ಗದೆಡೆಗೆ ಪಯಣ



WCG

WILDLIFE CONSERVATION GROUP

© WCG

# ಕಾನನ

DECEMBER 2011

ನಿಸರ್ಗದೆಡೆಗೆ ಪಯಣ

## ಲೇಖನಗಳು

* ಹಕ್ಕಿಲೋಕ – ನಾಗೇಶ್.ಓ.ಎಸ್

* ವೈಪರಿತ್ಯಕೆ ಹೊಣೆಗಾರ – ಕೃಷ್ಣನಾಯಕ್

* ವಿದ್ಯಾರ್ಥಿಗಾಗಿ ವಿಜ್ಞಾನ – ಮುರಳಿ .ಎಸ್
  - ಬಹುಗುಡ್ಡೆ ಕಣ್ಣುಳ್ಳ ಸಂದೀಪದಿಗಳ ಪೂರ್ವಜ
  - ಸೌರವ್ಯೂಹದಾಚೆಯ ಹೊಸ ಗ್ರಹಗಳು

ಅನಿಸಿಕೆ



E-mail: kaanana.mag@gmail.com

ಮುಖಪುಟ: ಹಾಲಕ್ಕಿ

© WCG



# ಸಂಪಾದಕೀಯ

ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನದ ಕಾಡುಗಳ ಪಕ್ಕದಲ್ಲೇ ಇರುವ ಹಳ್ಳಿಗಳ ಕೆಲ ಬೇಟೆಗಾರರು ಜಿಂಕೆ, ಕಡವೆ, ಕಾಟಿ, ಕಾಡುಹಂದಿ, ಮುಳ್ಳುಹಂದಿ, ಮೊಲಗಳು ಮತ್ತು ಕೆಲವು ಬಗೆಯ ಹಕ್ಕಿ ಪಕ್ಷಿಗಳ ಬೇಟೆ ಪದ್ದತಿಯನ್ನು ಯಾವುದೇ ರೋಧವಿಲ್ಲದೆ ಮುನ್ನಡಿಸಿಕೊಂಡು ಹೋಗುತ್ತಿದ್ದಾರೆ. ದುರ್ಗನಂತಹ ನೂರಾರು ಬೇಟೆಗಾರರ ಮೂಡನಂಬಿಕೆಗಳಿಂದ ಇಂದು ಅರಣ್ಯಗಳಲ್ಲಿ ಪ್ರಾಣಿ ಮತ್ತು ಪಕ್ಷಿಗಳು ಕಡಿಮೆಯಾಗಿವೆ ಎಂಬುದನ್ನು "ಹಕ್ಕಿಲೋಕ"ದಲ್ಲಿ ಮೂಡಿಸಿದೆ.

ಅರಣ್ಯ ಮತ್ತು ವನ್ಯಜೀವಿಗಳ ಸಂರಕ್ಷಣೆಯ ಜೊತೆಯಲ್ಲಿ ಪ್ರಥಮ ಬಾರಿಗೆ ವಿಜ್ಞಾನದ ಬಗ್ಗೆ "ವಿವಿಅಂಕಣ" ವಿಧ್ಯಾರ್ಥಿಗಾಗಿ ವಿಜ್ಞಾನ ಎಂಬ ಲೇಖನಮಾಲೆವನ್ನು ಈ ಸಂಚಿಕೆಯಿಂದ ಪ್ರಾರಂಭಿಸಿದ್ದೇವೆ,

ಇಂದು ಅಧುನಿಕ ಜಗತ್ತಿನಲ್ಲಿ ಅಭಿವೃದ್ಧಿಯ ಹೆಸರಲ್ಲಿ ನಡೆಯುತ್ತಿರುವ ಗಣಿಗಾರಿಕೆ, ಅರಣ್ಯಗಳ ನಾಶ, ಕೈಗಾರಿಕರಣ ಮತ್ತು ವಾಹನಗಳ ದಟ್ಟಣೆಯಿಂದ ಆಗುತ್ತಿರುವ ವಾಯುಮಾಲಿನ್ಯ, ಜಲಮಾಲಿನ್ಯ, ಶಬ್ಧಮಾಲಿನ್ಯಗಳಿಂದ, ಹವಾಮಾನ ವೈಪರಿತ್ಯವಾಗುತ್ತಿದ್ದು, ಗುಬ್ಬಿಯಿಂದ ಹಿಡಿದು ಜಗತ್ತಿನಲ್ಲಿರುವ ಇತರ ಜೀವಸಂಕುಲ, ಕಾಡುಗಳು, ನಕ್ಷತ್ರಗಳು ಎಲ್ಲವು ಮಾಸುತ್ತಿವೆ ಎಂಬುದನ್ನು ಕೃಷ್ಣನಾಯಕ್ ರವರು ಸುಂದರವಾಗಿ "ವೈಪರಿತ್ಯಕೆ ಹೊಣೆಗಾರ" ಎಂಬ ಕವನದಲ್ಲಿ ವರ್ಣಿಸಿದ್ದಾರೆ.

ಸಂತೋಷದ ಮತ್ತೊಂದು ವಿಷಯವೆಂದರೆ 'ಕಾನನ ಇ-ಮಾಸ ಪತ್ರಿಕೆ' ಈ ಸಂಚಿಕೆಗೆ ಒಂದು ವರ್ಷವನ್ನು ಪೂರೈಸಿ, ಎರಡನೇ ವರ್ಷಕ್ಕೆ ಕಾಲಿಟ್ಟಿದ್ದು. ಈ ಸಂಚಿಕೆಯಿಂದ ಕೆಲವು ಶಾಲೆಗಳಿಗೆ ಕಾನನ ಪತ್ರಿಕೆಯ ಮುದ್ರಿತಪ್ರತಿಯನ್ನು ನೀಡಲಾಗುತ್ತದೆ.

ಕಾನನವನ್ನು ಪ್ರಾಯೋಗಿಕವಾಗಿ **www.issuu.com** ವಿನಲ್ಲಿ ಪ್ರಕಟಿಸಲಾಗಿದೆ.
**http://www.issuu.com/kaanana** ಈ ವಿಳಾಸದಲ್ಲಿ
ನೀವು ಸುಲಭವಾಗಿ ಆನ್‌ಲೈನ್‌ನಲ್ಲೇ ಓದಬಹುದು.

ಅರಣ್ಯ, ವನ್ಯಜೀವಿ, ಪರಿಸರ ಸಂರಕ್ಷಣೆ, ವಿಜ್ಞಾನ, ವನ್ಯಜೀವಿ ಛಾಯಚಿತ್ರ, ಕವನ, ಕಥೆಗಳು ಹಾಗೂ ಲೇಖನಗಳನ್ನು ತಾವೂ ಕಾನನಕ್ಕೆ ಬರೆಯುಬಹುದು.

ಇ-ಮೇಲ್ ವಿಳಾಸ: **kaanana.mag@gmail.com**

**Wildlife Conservation Group**



# ಹಕ್ಕಿಲೋಕ

## * ಶಕುನದ ಹಕ್ಕಿ ಮತ್ತು ದುರ್ಗ

**ವೈಜ್ಞಾನಿಕ ಹೆಸರು:** ***Athene brama***

**ಇಂಗ್ಲೀಷ್ ಹೆಸರು: Spotted Owlet**




ವಾಜರಗುಡಿಸಲ ಪಕ್ಕದಲ್ಲೇ ಇರುವ ಲಾಯರಮ್ಮನ ಎಸ್ಟೇಟ್‌ನಲ್ಲಿ ಕೆಲಸ ಮಾಡಿಕೊಂಡು, ಸುಮಾರು ನಲವತ್ತು ವರ್ಷಗಳಿಂದ ನೆಲೆಸಿರುವ ದುರ್ಗನು ಸುತ್ತಮುತ್ತಲಿನ ಹಳ್ಳಿಗಳಿಗೆಲ್ಲ ಬೇಟೆಯಲ್ಲಿ ನಿಪುಣನೆಂದು ಎಲ್ಲರಿಗೂ ಗೊತ್ತು. ಲಾಯರಮ್ಮನ ತೋಟ ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನದ ಪಕ್ಕದಲ್ಲೇ ಇದೆ. ಈ ಕಾಡು ಹಲವಾರು ಪ್ರಾಣಿಗಳ ನೆಲೆಯಾಗಿದೆ. ಹಿಂದೆ ಈ ಕಾಡಿನಲ್ಲಿ ಜಿಂಕೆ, ಕಡವೆ, ಕಾಟಿ, ಕಾಡುಹಂದಿ, ಮುಳ್ಳುಹಂದಿ, ಮೊಲಗಳು ಮತ್ತು ಹಲವು ಜಾತಿಯ ಪಕ್ಷಿಗಳು ಹೇರಳವಾಗಿದ್ದವು. ಆದರೆ ಈಗ ಇಲ್ಲ ಬಿಡಿ!, ದುರ್ಗನಂತಹ ನೂರಾರು ಬೇಟೆಗಾರರ ತುತ್ತಿಗೆ ಬಲಿಯಾಗಿ ಬಹಳ ಕಡಿಮೆಯಾಗಿವೆ.

ದುರ್ಗನು ರಾತ್ರಿ–ಹಗಲು ಬೇಟೆಯಲ್ಲಿ ತೊಡಗಿ ಕಾಡುಹಂದಿ, ಕಾಡುಪಾಪ, ಮೊಲ, ಜಿಂಕೆ, ಬಾವಲಿ, ಗವುಜು, ಮತ್ತು ಕಾಡುಪಾರಿವಾಳಗಳಂತಹ ಹಲವಾರು ಪ್ರಾಣಿ–ಪಕ್ಷಿಗಳನ್ನ ಕೊಂದು ತಿಂದಿದ್ದಾನೆ ಹಾಗು ಅವನ ಸ್ನೇಹಿತರಿಗೂ ತಿನಿಸಿದ್ದಾನೆ. ಆದರೆ ದುರ್ಗನು ಕೆಲವು ಮೂಡನಂಬಿಕೆಗಳನ್ನು ನಂಬುತ್ತಿದ್ದ, ಬೇಟೆಗೆ ಹೊರಡುವಾಗ ಯಾರಾದರು ಎಲ್ಲಿಗೆ? ಏಕೆ? ಎಂದು ಯಾರೂ ಪ್ರಶ್ನಿಸಬಾರದು. ಮತ್ತೆ ಬೇಟೆಗೆ ಹೋಗುವಾಗ ಗೂಬೆಗಳ ದರ್ಶನ ಅವನಿಗಾಗಬಾರದು, ಬೇಟೆಗೆ ಹೋಗುವಾಗ ದಾರಿಯಲ್ಲಿ ಗೂಬೆಗಳು ಕಾಣಿಸಿಕೊಂಡರೆ, ಆ ದಿನ ಬೇಟೆಯಾಗುವುದಿಲ್ಲ'' ಎಂಬ ನಂಬಿಕೆ ದುರ್ಗನ ತಲೆಯಲ್ಲಿ ಕೂತುಬಿಟ್ಟಿತ್ತು.

ಒಂದು ದಿನ ಸಂಜೆ ದುರ್ಗನು ತನ್ನ ಮಗನ ಜೊತೆಗೂಡಿ ಕೇಪುಮದ್ದುಗಳನ್ನು ತನ್ನ ನಾಡಬಂದೂಕಿನ ಕೊಳವೆಯಲ್ಲಿ ತುಂಬಿ ಕಬ್ಬಿಣದ ಸರಳಿನಿಂದ 'ಕುಟ್ ಕುಟ್' ಎಂದು ಕುಟ್ಟುತ್ತಿದ್ದ. ಪಕ್ಕದ ತೋಟದಿಂದ ತಲೆಯ ಮೇಲೆ ಹುಲ್ಲುಹೊತ್ತುಕೊಂಡು ಮನೆಯ ಕಡೆ ಹೊರಟಿದ್ದ ಮಾರಕ್ಕನು ಇವರು ಮಾಡುತ್ತಿದ್ದ ಶಬ್ಧವನ್ನು ಕೇಳಿ ``ಏನ್ ದುರ್ಗಪ್ಪ ಬೇಟೆಗಾ?'' ಮುಖವರಳಿಸಿ ಕೇಳಿದಳು.

ದುರ್ಗನು ಕೋಪಗೊಂಡು " ತೂತ್ ತೇರಿ ಇವತ್ತು ಬೇಟೆ ಆದಂಗೆ?, ಇವಳ್ಯಾರೋ ಮಾರಿ ತನ್ನ ಕೆಲಸ ಮಾಡೋದ್ ಬಿಟ್ಟು, ಇದೆಲ್ಲಾ ಯಾಕೆ ಈ ವಮ್ಮನಿಗೆ " ಎಂದು ಪಿಸುಧನಿಯಲ್ಲಿ ಮಗನಿಗೆ ಕೇಳುವಂತೆ ಗೊಣಗಿದ.

ಮೊದಲೇ ಮಾರಕ್ಕನನ್ನು ಜನರು ಇವಳ ಮುಖ ನೋಡಿದಂದು ಕೆಲಸಗಳು ಆಗುವುದಿಲ್ಲ ಎಂದು ಹೇಳುತ್ತಿದ್ದುದರಿಂದ, ದುರ್ಗನಲ್ಲಿದ್ದ ಬೇಟೆಯ ಆಸಕ್ತಿಯನ್ನು ಅವಳ ಪ್ರಶ್ನೆ ಕಡಿಮೆಮಾಡಿತು, ಆದರೂ ಬೇಟೆಗೆ ಪೂರ್ತಿ ರೆಡಿಯಾಗಿದ್ದ ದುರ್ಗನು ನೋಡೇಬಿಡುವ ಎಂದು ತಲೆಗೆ ನೆತ್ತಿಬ್ಯಾಟರಿಯನ್ನು ಕಟ್ಟಿ, ಗನ್ನನ್ನು ತನ್ನ ಹೆಗಲ ಮೇಲೆ ಇಟ್ಟುಕೊಂಡು ತೋಲಕ್ಕಿಯ ಬೇಟೆಗಾಗಿ ಕಾಡಿನ ಮಗ್ಗುಲಲ್ಲೇ ಇರುವ ದೊಡ್ಡ ಅತ್ತಿಯ ಮರದ ಕಡೆಗೆ ತನ್ನ ಮಗನೊಡನೆ ಹೊರಟಿಯೇಬಿಟ್ಟ!. ಮೊದಲೇ ಅರ್ಧ ಮನಸ್ಸಿನಿಂದ ಹೊರಟಿದ್ದ ದುರ್ಗನಿಗೆ ಮಧ್ಯ ದಾರಿಯಲ್ಲಿ ಸಿಗುವ ಹೊಂಗೆಯ ಮರದ ಕೊಂಬೆಯ ಮೇಲೆ ಹೊಳೆಯುವ ಕಣ್ಣಗಳನ್ನು ನೋಡಿ ಇವುಗಳು ಗೂಬೆಯೆಂದು ತಿಳಿದು ಕೋಪ ನೆತ್ತಿಗೇರಿತು,

" ತುತ್ ಇವ್‌ಗಳ್ ಮನೆಕಾಯೋಗ ಇವ್‌ಕೆಲ್ಲು ಜಾಗ ಸಿಗ್‌ಲಿಲ್ಲೇನೋ ಸಾಯಕೆ, ಇಲ್ಲೇ ಬಂದು ಕೂತವೆ. ಇಂದು ಬೇಟೆ ಆದಂಗೆಯೇ. . . ಆ ಮಾರಿಯ ಮುಖ ನೋಡಿದಕ್ಕೆ ಈ ಅಪಶಕುನ ನೋಡು!'' ಎಂದು ತನ್ನ ಹೆಗಲ ಮೇಲಿದ್ದ ಕೋವಿಯನ್ನು ತೆಗೆದು ಹಿಂದು ಮುಂದು ನೋಡದೆ ಒಂದೇ ಏಟಿಗೆ ಜೋಡಿಯಾಗಿ ಕುಳಿತಿದ್ದ ಆ ಹಕ್ಕಿಗಳಲ್ಲಿ ಒಂದನ್ನು ನೆಲಕ್ಕೆ ಉರುಳಿಸಿದ. ಇವನ ಗುರಿ ಇಡುವುದರಲ್ಲಿ ಎತ್ತಿದ ಕೈ ಎಂದು ಅವನ ಬೇಟೆಯ ಬಾಡು ತಿಂದ ಸಹಪಾಟಿಗಳು ಹೇಳುತ್ತಾರೆ. ನೆಲಕ್ಕೆ ಬೀಳುವ ತನಕ ಗೂಬೆಯೆಂದುಕೊಂಡಿದ್ದ ದುರ್ಗನು ನೆಲಕ್ಕೆ ಬಿದ್ದ ಹಾಲಕ್ಕಿಯನ್ನು ನೋಡಿದಾಗಲೇ ತಿಳಿದಿದ್ದು ಅವನು ಕೊಂದದ್ದು ಅಪಶಕುನದ ಗೂಬೆಯನ್ನಲ್ಲಾ, ಶುಭಶಕುನದ ಹಾಲಕ್ಕಿಯನ್ನು ಎಂದು.



ಗೂಬೆಗಳನ್ನೇ ಹೋಲುವ ಈ ಹಾಲಕ್ಕಿಗಳು ಗೂಬೆಯ ಜಾತಿಗೆ ಸೇರಿದರೂ, ಗೂಬೆಗಳ ಮೇಲಿರುವ ಮೂಡನಂಬಿಕೆಗೆ ತದ್ವಿರುದ್ದವಾಗಿವೆ ಅಂದರೆ ಹಾಲಕ್ಕಿಗಳು ಶುಭಶಕುನದ ಹಕ್ಕಿಗಳೆಂದು ಹಾಗೂ ಜಾತಕದ ಪಕ್ಷಿಯೆಂದು ಜನರಲ್ಲಿ ನಂಬಿಕೆಯಿದೆ.  ಸಾಮಾನ್ಯವಾಗಿ ಹಾಲಕ್ಕಿಗಳು ಗೂಬೆಗಳನ್ನೇ ಹೋಲುವ ಗೊರವಂಕ (ಮೈನಾ) ಗಾತ್ರದ ಬೂದು ಹಕ್ಕಿ, ಗೂಬೆಗಳಿಗಿರುವಂತೆ ದೊಡ್ಡ ದೊಡ್ಡ ಹಳದಿ ಕಣ್ಣುಗಳು, ಎದೆಯ ಭಾಗದಲ್ಲಿ ಬೂದು ಚುಕ್ಕೆ, ದೇಹವಿಡಿ ಬಿಳಿಯ ಚುಕ್ಕೆ ಹಾಗೂ ಕೊಕ್ಕೆಯಂತಹ ಚಿಕ್ಕ ಕೊಕ್ಕು ಇದರ ಲಕ್ಷಣಗಳಾಗಿವೆ. ಇವುಗಳು ದೊಡ್ಡ ದೊಡ್ಡ ಮರಗಳು, ಪೊದೆ, ಕಟ್ಟಡಗಳ ಬಳಿ ವಾಸಿಸುತ್ತವೆ, ಮರದ ಪೊಟರೆಗಳಲ್ಲಿ ಗೂಡುಗಳನ್ನು ಮಾಡುವ ಇವುಗಳು  ಮೂರು ಅಥವಾ ನಾಲ್ಕು ಮೊಟ್ಟೆಗಳಿಟ್ಟು ಒಂದು ತಿಂಗಳೊಳಗೆ ಮರಿಮಾಡುತ್ತವೆ.

ಗೂಬೆಗಳೆಂದು ಹಾಲಕ್ಕಿಯನ್ನು ಕೊಂದ ದುರ್ಗನು ಮನಸ್ಸಿನಲ್ಲಿಯೇ ನೊಂದುಕೊಂಡನು ಅದನ್ನು ಕೈಗೆ ಎತ್ತಿಕೊಂಡು 'ಮಗ ಯಾಕೋ ಇವತ್ ನಮ್ ಟೈಮ್ ಸರಿಯಿಲ್ಲ ಅಂತ ಕಾಣ್ಸ್ತದೆ ನಡಿ ಬ್ಯಾಟೆನೂ ಬ್ಯಾಡ ಗೀಟೆನೂ ಬ್ಯಾಡ ಮನೆಗೋಗಣ' ಎಂದು ಕೈಯಲ್ಲಿದ್ದ ಹಾಲಕ್ಕಿ ಯನ್ನು ಪಕ್ಕಕ್ಕೆ ಬಿಸಾಡಿ ಮನೆಯಕಡೆ ಹಿಂದಿರುಗಿದ.





# ವೈಪರಿತ್ಯಕೆ ಹೊಣೆಗಾರ

ದಾರಿತೋರುವ ಧೃವ ನಕ್ಷತ್ರ ಕಾಣದೀಗ
ಮುಂಜಾನೆಯ ಬೆಳ್ಳಿ ಚುಕ್ಕಿ ದೂರವೀಗ
ಹೊಂಬೆಳಕಲಿ ಮಂಜಹನಿ ಹೊಳಯದೀಗ
ಸಂಜೆ ಹೊತ್ತು ಸೂರ್ಯ ಬಣ್ಣ ಬದಲಿಸದೀಗ

ಚಿಲಿಪಿಲಿಯ ಸದ್ದು ಕಾಣದೀಗ
ಮೆಲ್ಲಮೆಲ್ಲ ಹೆಜ್ಜೆಯನಿಟ್ಟು
ಹೊಸ್ತಿಲೊಳಗೆ ಅಣುಕಿಣುಕಿ ಒಳಬರುವ
ಗುಬ್ಬಚ್ಚಿಯ ಹೆಜ್ಜೆ ಗುರುತಿಲ್ಲ

ಬಗೆಬಗೆಯ ಕುಸುಮಗಳ ಬಯಕೆ ತೀರಿಸಿ
ಹೊರ ಬರುವ ಪತಂಗದ ಹಾದಿ ಬಲ್ಲೆಯೇನು,
ಅದುಕೂಡ ಸಿಗದೀಗ
ಮನೋಲಾಷಿ ಬದುಕಿಗೆ ಕರಿ ನೆರಳೀಗ

ಅಭಿವೃದ್ಧಿಯ ಹೆಸರಲ್ಲಿ ಸಂಪತ್ತೆಲ್ಲಾ ಕರಗಿ
ಮಾಲಿನ್ಯಕ್ಕೆ ನಾಂದಿಯಾಯಿತೀಗ
ಕಾನೂನು ಕಟ್ಟಲೆಯ ಅಡಿಯಲ್ಲಿ
ಸಂರಕ್ಷಣೆ ಎಲ್ಲಿ?
ಹವಾಮಾನ ವೈಪರಿತ್ಯಕೆ ಹೊಣೆಗಾರ,
ಸಹಜತೆಯ ಕಾಪಾಡುವುದಾದರೂ ಹೇಗೆ? ಈಗ!

ಬಾನಾಡಿಗಳ ಹಾರಾಟ ದೂರ ದೂರ,
ವನ್ಯಜೀವಿಗಳ ಭಾವಚಿತ್ರಗಳ ಬರೀ ಸಂಗ್ರಹಣೆ ಸಾಕೇ?

– ಕೃಷ್ಣನಾಯಕ್
ವನ್ಯಜೀವಿಗಳ ಬಗ್ಗೆ ಪ್ರೀತಿಯಿರುವ ಇವರು
ಮದೇಶ್ವರ ರಕ್ಷಿತ ಅರಣ್ಯದ ಬಳಿ ಕೃಷಿ ಜೊತೆಗೆ
ಸಾಹಿತ್ಯ ಕೃಷಿಯಲ್ಲಿ ತೊಡಗಿರುವ
ವಿಜ್ಞಾನ ಪದವೀಧರರು. -09611428901

© W C G


# ವಿದ್ಯಾರ್ಥಿಗಾಗಿ ವಿಜ್ಞಾನ

### ಈ ತಿಂಗಳ ವಿಜ್ಞಾನ ಲೋಕದಲ್ಲಿ ಹೊಸದು


## ಅನೋಮಾಲೋಕಾರಿಸ್

### *ಬಹುಗುಡ್ಡೆ ಕಣ್ಣುಳ್ಳ ಸಂದೀಪದಿಗಳ ಪೂರ್ವಜ.*

ನಮಗೆಲ್ಲರಿಗೂ ಒಂದು ಜೊತೆ ಕಣ್ಣುಗಳಿವೆ. ಪ್ರತೀ ಕಣ್ಣಿನಲ್ಲೂ ಒಂದೊಂದು ಮಸೂರವಿದೆ. ಆದರೆ ಕೀಟಗಳಲ್ಲಿ ಈ ರೀತಿ ಇರುವುದಿಲ್ಲ. ಅದರ ಒಂದು ಕಣ್ಣಿನಲ್ಲೇ ನೂರಾರು ಮಸೂರಗಳಿರುತ್ತವೆ. ಅಂದರೆ ಅವಕ್ಕೆ ಒಂದು ಕಣ್ಣೇ ನೂರು ಕಣ್ಣು ಇದ್ದ ಹಾಗೆ. ಈ ಎಲ್ಲ ಕಣ್ಣುಗಳಿಂದ ಬಂದ ಸಣ್ಣ ಸಣ್ಣ ತುಣುಕುಗಳಾಗಿ ಕಂಡ ದೃಶ್ಯವನ್ನು ಆ ಕೀಟದ ಮೆದುಳು ಒಂದೇ ದೃಶ್ಯವಾಗಿ ಸಂಯೋಜಿಸುತ್ತದೆ. ಕೀಟಗಳಲ್ಲಿ ಕಂಡು ಬರುವ ಈ ರೀತಿಯ ಗೊಂಚಲು ಕಣ್ಣುಗಳನ್ನು 500 ಮಿಲಿಯನ್ ವರ್ಷಗಳ ಹಿಂದೆ ವಾಸಿಸುತ್ತಿದ್ದ *ಅನೋಮಾಲೋಕಾರಿಸ್* ಎಂಬ ಜೀವಿ ಹೊಂದಿತ್ತು ಎಂದು ಸಂಗತಿಯನ್ನು ವಿಜ್ಞಾನಿಗಳು ಆ ಜೀವಿಯ ಪಳವಳಿಕೆಯನ್ನು ಗಮನಿಸಿ ಕಂಡು ಹಿಡಿದಿದ್ದಾರೆ. ಅದರ ಕಂಪ್ಯೂಟರ್ ಜನಿತ ಪ್ರತಿಕೃತಿಯೊಂದನ್ನು ಚಿತ್ರದಲ್ಲಿ ತೋರಿಸಲಾಗಿದೆ. ಇದರ ಪ್ರತಿ ಕಣ್ಣಿನಲ್ಲಿ 16000 ಮಸೂರಗಳು ಇವೆಯಂತೆ! ಈ ಕಣ್ಣುಗಳನ್ನು ನೋಡಿಯೇ ಇದು ಸಂದೀಪದಿಗಳ ಪೂರ್ವಜರಲ್ಲಿ ಒಂದು ಎಂದು ಗುರುತಿಸಲಾಗಿದೆ. ***ಅನೋಮಾಲೋಕಾರಿಸ್*** ಜೀವಿಯು ಪುರಾತನ ಕಾಲದಲ್ಲಿ ಸಾಗರದಲ್ಲಿ ಬೇಟೆಯಾಡುವ ಪ್ರಾಣಿಯಾಗಿತ್ತು. ಇಷ್ಟು ಜಟಿಲವಾದ ಕಣ್ಣುಗಳನ್ನು ನೋಡಿಯೇ ಅದು ಬಹಳ ಕುಶಲವಾಗಿ ಬೇಟೆಯಾಡುತ್ತಿತ್ತು ಎಂದು ಊಹಿಸಲಾಗಿದೆ.









# *ಕೆಪ್ಲರ್–20e ಮತ್ತು ಕೆಪ್ಲರ್–20f*


## ಸೌರವ್ಯೂಹದಾಚೆಯ ಹೊಸ ಗ್ರಹಗಳು


ಈ ಗ್ರಹಗಳು ನಮ್ಮ ಸೌರಮಂಡಲದಿಂದ ಆಚೆ ಇರುವ *ಕೆಪ್ಲರ್–20* ಎಂಬ ನಕ್ಷತ್ರವನ್ನು ಸುತ್ತುತ್ತಿವೆ. *ಕೆಪ್ಲರ್–20e* ನಮ್ಮ ಶುಕ್ರ ಗ್ರಹದ ಮತ್ತು *ಕೆಪ್ಲರ್–20f* ಭೂಮಿಯ ಗಾತ್ರದ್ದಾಗಿವೆ. ಈ ಎರಡು ಗ್ರಹಗಳು ನಕ್ಷೆತ್ರದ ಬಹಳ ಹತ್ತಿರದಲ್ಲಿ *ಕೆಪ್ಲರ್–20* ನಕ್ಷತ್ರದ ಸುತ್ತ ಸುತ್ತುತ್ತಿರುವುದರಿಂದ ಅಲ್ಲಿ ಜೀವವಿಕಾಸಕ್ಕೆ ಅವಕಾಶ ತುಂಬಾ ಕಡಿಮೆ. ಈ ಎರಡೂ ಗ್ರಹಗಳು ತನ್ನ ಅಕ್ಷದ ಸುತ್ತ ಸುತ್ತದೇ ಲಾಕ್ ಆಗಿರು ಆಗಿರುವುದರಿಂದ ಒಂದು ಕಡೆ ಪೂರ್ತಿ ಕತ್ತಲು ಇನ್ನೊಂದು ಕಡೆ ಪೂರ್ತಿ ಬೆಳಕು ಇದೆಯಂತೆ. ಆದರೆ ಕೆಲವು ಭಾಗಗಳಲ್ಲಿ ತ್ರಿಸಂಧ್ಯೆ ಅಥವ ಮುಂಬೆಳಕು ಇದ್ದು, ಅಲ್ಲಿ ಜೀವ ಸಂಕುಲಕ್ಕೆ ಸಮರ್ಪಕವಾದ ಉಷ್ಣಾಂಶ ಇರಬಹುದು ಎಂದು ಎಂದು ವಿಜ್ಞಾನಿ ಪ್ರಾಂಕಾಯ್ಸ್ ಪ್ರೀಸೀಸ್ ಹೇಳುತ್ತಾರೆ.


ಈ ಗ್ರಹಗಳ ಅವಿಷ್ಕಾರ ಅಸಾಮಾನ್ಯವಾದುದ್ದು ಏಕೆಂದರೆ ಈ ಗ್ರಹಗಳು ನಮ್ಮ ಭೂಮಿಯಿಂದ 946 ಜ್ಯೋತಿರ್ವರ್ಷ ದೂರದಲ್ಲಿವೆ. ಭೂಮಿಯ ಮೇಲೆ ಮೌನ–ಕಿಯಾದಲ್ಲಿರುವ ಅತ್ಯಂತ ದೊಡ್ಡದಾದ 10 ಮೀಟರ್ ‘ಕೆಕ್’ ದೂರದರ್ಶಕದಲ್ಲೂ ಇವನ್ನು ನೋಡಲು ಸಾಧ್ಯವಾಗಲಿಲ್ಲ. ಇವುಗಳ ಪರಿಭ್ರಮಣ ಕಾಲವು ಕೇವಲ 20 ದಿನಗಳು, ಈ ಪರಿಮಾಣವನ್ನು ಬಳಸಿ ಕೊನೆಗೂ ‘ಹೇಲ್’ ದೂರದರ್ಶಕದ ಮೂಲಕ ಚಿತ್ರಗಳನ್ನು ತೆಗೆದು ಅಂಕಿ ಅಂಶಗಳಿಂದ ದೃಢಪಡಿಸಿ ಕಂಡುಹಿಡಿದಿದ್ದಾರೆ.





ಕಾನನ
ಡಿಸೆಂಬರ್ 2010
* ರಂಗನತಿಟ್ಟು ಪಕ್ಷಿಧಾಮ


ಕಾನನ
ಜನವರಿ 2011
* ನಮ್ಮ ವನ್ಯ ಸಂಪದ
WILDLIFE
CONSERVATION
GROUP



ಕಾನನ
2011
WILDLIFE
CONSERVATION
GROUP


ಕಾನನ
2011
WILDLIFE
CONSERVATION
GROUP



ಕಾನನ
April 2011
ನಿಸರ್ಗದೆಡೆಗೆ ಪಯಣ
© WCG
WILDLIFE
CONSERVATION
GROUP


ಕಾನನ
MAY 2011
ನಿಸರ್ಗದೆಡೆಗೆ ಪಯಣ
© WCG
WILDLIFE
CONSERVATION
GROUP


ಕಾನನ
JUNE 2011
ನಿಸರ್ಗದೆಡೆಗೆ ಪಯಣ
© WCG
WILDLIFE
CONSERVATION
GROUP


ಕಾನನ
JULY 2011
ನಿಸರ್ಗದೆಡೆಗೆ ಪಯಣ
WILDLIFE
CONSERVATION
GROUP


ಕಾನನ
AUGUST 2011
ನಿಸರ್ಗದೆಡೆಗೆ ಪಯಣ
© WCG
WILDLIFE
CONSERVATION
GROUP


ಕಾನನ
SEPTEMBER 2011
ನಿಸರ್ಗದೆಡೆಗೆ ಪಯಣ
© WCG
WILDLIFE
CONSERVATION
GROUP


ಕಾನನ
OCTOBER 2011
ನಿಸರ್ಗದೆಡೆಗೆ ಪಯಣ
© WCG
WILDLIFE
CONSERVATION
GROUP


ಕಾನನ
NOVEMBER 2011
ನಿಸರ್ಗದೆಡೆಗೆ ಪಯಣ
© WCG
WILDLIFE
CONSERVATION
GROUP